ಕಂಡು ನಗುತ್ತಾ, 'ಗೊಂದಲ ಮಾಡಿಕೊಳ್ಳಬೇಡ. ನನ್ನ ಮಗ... ಸಾರಂಗ್... ನೀನು ನೋಡಿರುವೆಯಲ್ಲ. 32 ವರ್ಷ ಎಂ.ಟೆಕ್. ಮಾಡಿದ್ದಾನೆ. ಆದ್ರೆ ಕೆಲ್ಸ ಬಿಟ್ಟು ವೈಲ್ಡ್‌ಲೈಫ್ ಫೋಟೋಗ್ರಾಫರಾಗಿದ್ದಾನೆ. ಹಾಗಂತ ಅವನಿಗೆ ಸಂಪಾದನೆಯಿಲ್ಲ ಅಂತ ತಿಳಕೋಬೇಡ. ನಿನಗೆ ಹೆಚ್ಚು ಹೇಳೋ ಅಗತ್ಯವಿಲ್ಲ. ನೀನು ಜಾಣೆ. ಅರ್ಥ ಮಾಡಿಕೊತ್ತೀಯ ನನ್ನ ಈ ಎಲ್ಲ ಹಣ, ಆಸ್ತಿ ಪಾಸ್ತಿಗಳು ಅವನದೇ ಅಲ್ಲವೆ?' ಎಂದರು ಸಂಭ್ರಮದಿಂದ ಅವಳ ಮುಖವನ್ನೇ ನೋಡುತ್ತಾ. ಒಂದುಕ್ಷಣ ನಿರಾಶೆಯ ನೆರಳೊಂದು ಹಾದು ಹೋದಂತೆ ಮ್ಲಾನವಾದಳು. ಮರುಕ್ಷಣವೇ ಎಚ್ಚೆತ್ತುಕೊಂಡು, 'ಗುರೂಜಿ... ನನಗಿಷ್ಟು ಸಮಯ ಕೊಡಿ ಯೋಚಿಸುತ್ತೇನೆ' ಎಂದಳು. ಸರಕ್ಕನೆ ನಿರಾಶೆಯಾದರೂ ತೋರ್ಪಡಿಸಿಕೊಳ್ಳದೆ, 'ಆಗಲಿ ಸಮಯ ತೆಗೆದುಕೋ ಪರವಾಗಿಲ್ಲ' ಎಂದು ಏಳುವಷ್ಟರಲ್ಲಿ ಅವಳಲ್ಲಿಂದ ಎದ್ದು ಹೋಗಿದ್ದಳು. ಅಲ್ಲಿಂದ ಸುಮಾರು ಹದಿನೈದು ದಿನಗಳು ಅವಳ ಕುರಿತು ಏನೂ ಮಾತಾಡಲಿಲ್ಲ. ಗಾಯಕವಾಡರು ಅಪ್ಪಿ ತಪ್ಪಿಯೂ ಕೇಳಲಿಲ್ಲ. ಇದ್ದಕ್ಕಿದ್ದಂತೆ ಆ ದಿನ ಅವಳೇ ಮಾತು ತೆಗೆದು, 'ಗುರೂಜಿ... ನಿಮ್ಮ ಮಗನ ಜೊತೆ ಒಮ್ಮೆ ಮಾತಾಡಿ ನಿರ್ಧರಿಸುತ್ತೇನೆ' ಎಂದಳು. ಗಾಯಕವಾಡರಿಗೆ ಹರ್ಷ ಮೇರೆದಪ್ಪಿತು. 'ಆಗಲಿ ನೀನಾ, ನಾಳೆ ಅವನು ಬರುತ್ತಿದ್ದಾನೆ' ಎಂದರು.

ಆ ಸಂಜೆ ಅವರಿಬ್ಬರೂ ಕಾರಿನಲ್ಲಿ ಕುಳಿತು ಚಾಮುಂಡಿಬೆಟ್ಟಕ್ಕೆ ಹೊರಟಾಗ, ಆಗಷ್ಟೇ ಅರವತ್ತು ದಾಟಿ ವೃದ್ಧಾಪ್ಯಕ್ಕೆ ಎಡೆ ಇಡುತ್ತಿದ್ದ ಕಣ್ಣುಗಳಿಂದ ಅವರಿಬ್ಬರನ್ನು ಕಣ್ತುಂಬಿಕೊಂಡು ಹರ್ಷಿಸುತ್ತಿದ್ದ ಗಾಯಕವಾಡರಿಗೆ ಒಂದೆರೆಡು ಆನಂದ ಬಾಷ್ಪಗಳು ಕಣ್ಣಿಂದುದುರಿದವು. ಅವರಿಬ್ಬರೂ ಹಿಂತಿರುಗಿದಾಗ ರಾತ್ರಿ ಒಂಬತ್ತು ಗಂಟೆ ದಾಟಿತ್ತು. ಸೋನಮ್ಮನಿಗೆ ಹೇಳಿ ವಿಶೇಷ ಸಿಹಿ ಅಡಿಗೆ ಮಾಡಿಸಿ, ಟೇಬಲ್ಲಿನಲ್ಲಿ ತಾಟು ಅಣಿಗೊಳಿಸಿ ಕಾದಿದ್ದವರಿಗೆ ಅವರಿಬ್ಬರಿರ ಪೆಡಸಾದ ಮುಖಗಳನ್ನು ನೋಡಿ ಆತಂಕವಾಗಿ ಏನೂ ಕೇಳದೆ ಮೌನದಲ್ಲಿ ಮಗಿದು ಹೋದ ಊಟಕ್ಕೆ ಮರುಗುತ್ತಾ ಕುಳಿತಿದ್ದಾಗ...

'ಪಪ್ಪ, ನೀನಾ ನಿನ್ ಜೊತೆ ಮಾತಾಡ್ತಾರೆ. ನಾನೀಗ ಹೊರಟೆ ರಾತ್ರಿ ಟ್ರೈನಿಗೆ ಧಾರವಾಡಕ್ಕೆ, ಬೈ' ಎಂದು ನುಡಿದು ತೆರಳಿದ ಮಗನನ್ನೇ ನೋಡುತ್ತಾ ಅತಂತ್ರರಾಗಿ ನೀನಾಳನ್ನು ನೋಡಿ, 'ಏನಾಯ್ತು?' ಎಂದರು. 'ಗುರೂಜಿ, ನಿಮ್ಮ ಮಗನಿಗೆ ನಾನು ಇಷ್ಟವಾಗಲಿಲ್ಲ. ಹಾಗೇ ನನಗೂ ಅವರು' ಎಂದಳು. ತಮ್ಮ ಕನಸಿನ ಸೌಧವೊಂದು ಲಟಲಟನೆ ಮುರಿದುಬಿದ್ದಂತಾಯಿತು. ವ್ಯಾಕುಲತೆಯಿಂದ ಅವಳನ್ನೇನೋಡುತ್ತಾ ಕುಳಿತರು. ಅವಳೇ ಮಾತು ಮುಂದುವರಿಸುತ್ತಾ...

'ಗುರೂಜೀ ನಿಮ್ಮ ಮಗನ್ನ ಮುದುವೆ ಮಾಡಿಕೊಂಡರೂ ಅಷ್ಟೆ. ಡೆಲ್ಲಿ ಹುಡುಗನ್ನಾದರೂ ಅಷ್ಟೆ ಅಥ್ವ ಇನ್ಯಾರಾದರೂ ಅಷ್ಟೆ. ಪ್ರಶ್ನೆ ಅದಲ್ಲ, ನನ್ನ ಸರಸ್ವತಿ ನನ್ನ ಜೊತೆಗಿರಬೇಕಾದರೆ ನಾನು ಸಾಧನೆ ಮಾಡಬೇಕು. ಅದಕ್ಕೆ ನಿಮ್ಮಂಥವರೆ ನನ್ನ ಸಂಗಾತಿಯಾಗಬೇಕು. ನಿಮ್ಮಂಥವರೇ ಬೇಕೆಂದಾಗ ನೀವೇ ಯಾಕಾಗಬಾರದು ಹೇಳಿ?' ಎಂದಳು. ದಿಗ್ಭ್ರಾಂತರಂತೆ ಗರಬಡಿದವರಂತೆ, 'ಏನಿದು ಹುಚ್ಚುಚ್ಚಾರ ನಿಂಗೇನು ತಲೆ ಕೆಟ್ಟಿದ್ಯಾ ನೀನಾ?' ಎಂದರು. 'ಏನೂ ಆಗಿಲ್ಲ. ತಲೆ ಸರಿಯಾಗೇ ಇಟ್ಟು ಕೊಂಡಿದ್ದೀನಿ. ನಿಮಗಿಂತ ನನ್ನ ಯಾರು ಚೆನ್ನಾಗಿ ಅರ್ಥಮಾಡ್ಕೊಂಡಿದ್ದಾರೆ ಗುರೂಜಿ. ನನ್ನ ಸಣ್ಣ ಸಣ್ಣ ಆಸೆಗಳನ್ನು ಪೂರೈಸೋದಿಲ್ವ ನೀವು?' ಎಂದಳು. 'ಅದು ಹಾಗಲ್ಲ ನೀನಾ... ನೀನು ನನ್ನ ಶಿಷ್ಯೆ. ಶಿಷ್ಯೆ ಮಗಳಿದ್ದ ಹಾಗೆ' ಎಂದರು.

'ಸುಳ್ಳು ಗುರೂಜಿ. ಮಗಳಿದ್ದ ಹಾಗೆ, ಅಂದರೆ ಮಗಳಾಗೋದಿಲ್ಲ. ನಮ್ಮಿಬ್ಬರ ಆಸೆ, ಆಸಕ್ತಿ, ಆಕಾಂಕ್ಷೆಗಳು, ಬದುಕು... ಎಲ್ಲವೂ ಸಂಗೀತವೇ. ನಿಮ್ಮ ಘರಾಣದ ಸಾಮ್ರಾಜ್ಞಿಯಾಗೆಂದಿರಲ್ಲ